**O.S.No.274/2015** **PW – 1**

**ಪ್ರಮಾಣೀಕರಿಸಲಾದ ದಿನಾಂಕ : 21.01.2026.**

**<u>ಮುಂದುವರೆದ ವಾಟೀ ಸವಾಲು : ಪ್ರತಿವಾದಿ ಪರ ಶ್ರೀ. H.L ವಕೀಲರಿಂದ</u> :-**

ಯಾವುದಾದರೂ ನನ್ನ ಸಹಿಯುಳ್ಳ ದಾಖಲಾತಿಯನ್ನು ತೋರಿಸಿದ್ದಲ್ಲಿ ಅದು ನನ್ನ ಸಹಿಯೋ ಇಲ್ಲವೋ ಎಂದು ಗುರುತಿಸಬಲ್ಲೆ. ದಿಃ 16.09.2010 ರಂದು ನೀವು, ನಿಮ್ಮ ತಾಯಿ, ನಿಮ್ಮ ಸಹೋದರ ಸಹೋದರರೆಲ್ಲರೂ ಸೇರಿಕೊಂಡು ಪಾರೀಕತ್ತನ್ನು ಪರವಾನಗಿಯ ಮುಖಾಂತರ ಮಾಡಿಕೊಂಡಿದ್ದು ಅದರಲ್ಲಿನ ನಿಮ್ಮ ಸಹಿಯನ್ನು ನೋಡಿದರೆ ನಿಮ್ಮದೋ ಅಲ್ಲವೋ ಎಂದು ಗುರುತಿಸುತ್ತೀರಾ ಎಂದರೆ ಹೌದು ಎಂದು ನುಡಿಯುತ್ತಾರೆ. ಈ ಹಂತದಲ್ಲಿ ಸಾಕ್ಷಿಯು ಸದರಿ ಪಾರೀಕತ್ತಿನ ಮೂಲಪ್ರತಿಯನ್ನು ತೋರಿಸಿದ್ದು ಅದರಲ್ಲಿನ ಪ್ರಮೀಳಾ ಎಂಬ ಹೆಸರಿನ ಸಹಿಯು ನನ್ನದಲ್ಲ ಎಂದು ನುಡಿಯುತ್ತಾರೆ. ಸದರಿ ಸಹಿಯನ್ನು ಕೈ ಬರವಣಿಗೆ ತಜ್ಞರಿಗೆ ಸಲ್ಲಿಸಲು ನನ್ನದು ಯಾವುದೇ ತಕರಾರು ಇಲ್ಲ ಎಂದು ತಿಳಿಸುತ್ತಾರೆ. ನಿಮ್ಮದೇ ಸಹಿ ಎಂದು ತಿಳಿದಿದ್ದರೂ ಸಹ ನಿಮ್ಮದಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಸದರಿ ಪಾರೀಕತ್ತಿನಲ್ಲಿ ನೀನು ಹಾಗೂ ನಿಮ್ಮ ಇಬ್ಬರು ಜನ ಸಹೋದರಿಯರು ನಮಗೆ ಯಾವುದೇ ಆಸ್ತಿ ಬೇಡ ಬದಲಾಗಿ ತಲಾ 1 ಲಕ್ಷ ರೂಪಾಯಿಗಳು ತೆಗೆದುಕೊಂಡಿರುತ್ತೇವೆ ಎಂದು ಪಂಚಾಯಿತಿದಾರರ ಸಮಕ್ಷಮ ಸಹಿಗಳನ್ನು ಹಾಕಿರುತ್ತೀರಿ ಎಂದರೆ ಸರಿಯಲ್ಲ.

**<u>ಮುಂದುವರೆದ ವಾಟೀ ಸವಾಲು : ಪ್ರತಿವಾದಿ ಪರ ವಕೀಲರ ಕೋರಿಕೆ ಮೇರೆಗೆ ಮುಂದೂಡಲಾಯಿತು.</u>**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)**

**ಸಹಿ/-**
**ಅಪರ ಸಿವಿಲ್ ನ್ಯಾಯಾಧೀಶರು, ತಿಪಟೂರು.**